# ಕ.ರಾ.ರ.ಸಾ.ನಿಗಮ :: ಮೈಸೂರು ವಿಭಾಗ :: ಮೈಸೂರು

ಸಂ:ಕರಾಸಾ/ಮೈವಿ/ಸಂ/ವಾ/ 3890 /2022-23 ದಿನಾಂಕ:-28-01-2023

## ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ಸಂ:05/2022-23

("ಇ" ಪ್ರಕ್ಯೂರ್‌ಮೆಂಟ್ ವೇದಿಕೆ ಮುಖೇನ)

ಕ.ರಾ.ರ.ಸಾ.ನಿಗಮ ಮೈಸೂರು ವಿಭಾಗಕ್ಕೆ ಸೇರಿದ ಸಾತಗಳ್ಳಿ ಬಸ್ ನಿಲ್ದಾಣದಲ್ಲಿ ಖಾಲಿಯಿರುವ/ಖಾಲಿಯಾಗುವ ಸ್ಥಳಗಳನ್ನು ಹೇಗಿದೆಯೊ/ಎಲ್ಲಿದೆಯೋ (As is where is condition) ಹಾಗೆ ಸಾ.ಸ್ಥಾ.ಆದೇಶ ಸಂ;787 ರಂತೆ ಪರವಾನಗಿ ಮೇಲೆ ನೀಡಲು ಉದ್ದೇಶಿಸಲಾಗಿದೆ. "ಇ"-ಪ್ರಕ್ಯೂರ್‌ಮೆಂಟ್ ಸೆಲ್‌ನಿಂದ ಡಿ.ಎಸ್.ಸಿ (ಡಿಜಿಟಲ್ ಸಿಗ್ನೇಚರ್ ಸರ್ಟಿಫಿಕೇಟ್) ಪಡೆದಿರುವ ಅಧಿಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಪ್ರತಿ ವರ್ಷ ಲೈಸೆನ್ಸ್ ಶುಲ್ಕದ ಮೇಲೆ ಶೇ.10% ರಷ್ಟು ಹೆಚ್ಚಳವಿರುತ್ತದೆ. ಶಾಶ್ವತ ಮಳಿಗೆ/ ಕೊಠಡಿಯನ್ನು 05 ವರ್ಷದ ಅವಧಿಗೆ ಹಾಗೂ ವಾಣಿಜ್ಯ ಸ್ಥಳ-1 ರಿಂದ 8 ರವರೆಗೆ ಕಛೇರಿಗಳು (ಶೈಕ್ಷಣಿಕ ಆಧಾರಿತ ಸೇವಾ ಚಟುವಟಿಕೆಗಳಿಗಾಗಿ) 10 ವರ್ಷದ ಅವಧಿಗೆ ಕರಾರು ಮಾಡಿಕೊಳ್ಳಲಾಗುವುದು. ಇಚ್ಛೆಯುಳ್ಳವರು ಸಂಬಂಧಿಸಿದ ವಾಣಿಜ್ಯ ಸ್ಥಳ/ಕೊಠಡಿಗಳ ಮುಂದೆ ಸೂಚಿಸಿರುವ ಇ.ಎಂ.ಡಿ. ಮೊತ್ತದಲ್ಲಿ ರೂ.500/-ನ್ನು 'ಇ'-ಪ್ರಕ್ಯೂರ್‌ಮೆಂಟ್ ಮೂಲಕ ಪಾವತಿಸುವುದು, ಉಳಿಕೆ ಇ.ಎಂ.ಡಿ ಮೊತ್ತ ಹಾಗೂ ಅರ್ಜಿಶುಲ್ಕ/ ಜಿ.ಎಸ್.ಟಿ ಶುಲ್ಕದ ಮೊತ್ತವನ್ನು ಡಿ.ಡಿ.ಮೂಲಕ, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ವಿಭಾಗ, ಮೈಸೂರುರವರಿಗೆ ಸಲ್ಲಿಸುವುದು.

ಇ-ಟೆಂಡರ್‌ನಲ್ಲಿ ದಿನಾಂಕ: 30-01-2023 ರಿಂದ ದಿ: 13-02-2023ರ 14.00 ಗಂಟೆಯವರೆಗೆ ಬಿಡ್ ಸಲ್ಲಿಸುವುದು. ದಿನಾಂಕ:15-02-2023 ರಂದು 15:00 ಗಂಟೆಗೆ ಇ-ಟೆಂಡರ್ (ತಾಂತ್ರಿಕ ತೊಂದರೆಗಳು ಇಲ್ಲದಿದ್ದಲ್ಲಿ) ತೆರೆಯಲಾಗುವುದು. ವಾಣಿಜ್ಯ ಸ್ಥಳಗಳ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ಬಸ್ ನಿಲ್ದಾಣ ಹೆಸರು | ಖಾಲಿ ಇರುವ ವಾಣಿಜ್ಯ ಮಳಿಗೆ | ವಿಸ್ತೀರ್ಣ (ಚ.ಅಡಿ) | ಮಾಸಿಕ ಮಿತವ್ಯಯ ಶುಲ್ಕ ರೂ.ಗಳಲ್ಲಿ | ಇ.ಎಂ.ಡಿ ಡಿ.ಡಿ .ಮುಖೇನ ಈ ಕಛೇರಿಗೆ ರೂಗಳಲ್ಲಿ | ಇ.ಎಂ.ಡಿ 'ಇ' ಪೋರ್ಟಲ್ ಮುಖೇನ ರೂಗಳಲ್ಲಿ | ಪರವಾನಗಿ ಅವಧಿ/ ವರ್ಷಗಳು | ಅರ್ಜಿಶುಲ್ಕ+ ಜಿ.ಎಸ್.ಟಿ ಡಿ.ಡಿ.ಮುಖೇನ ಈ ಕಛೇರಿಗೆ ಸಲ್ಲಿಸಬೇಕಾದ ಮೊತ್ತ. ರೂ |
|---|---|---|---|---|---|---|---|---|
| 1 | ಸಾತಗಳ್ಳಿ ಬಸ್ ನಿಲ್ದಾಣ. | ವಾಣಿಜ್ಯ ಸ್ಥಳ ಸಂ-1 (ಪ್ರಸ್ತುತ ಆಶಿರ್ವಾದ್ ಆಸ್ಪತ್ರೆ ಇರುವ ಸ್ಥಳ) ಬ್ಲಾಕ್-ಬಿ & ಸಿ ನೆಲ ಅಂತಸ್ತು, | 9842.60 ಚ.ಅಡಿ | 63000/- | 189000/- | 500/- | 10 ವರ್ಷಗಳ | 630+113=743 |
| 2 | ಸಾತಗಳ್ಳಿ ಬಸ್ ನಿಲ್ದಾಣ. | ವಾಣಿಜ್ಯ ಸ್ಥಳ ಸಂ-2 (ಪ್ರಸ್ತುತ ರಿಜಿನಲ್ ಇಂಟರ್ ನ್ಯಾಷನಲ್ ಸ್ಕೂಲ್ ಇರುವ ಸ್ಥಳ) ಬ್ಲಾಕ್-ಎ, ನೆಲ ಅಂತಸ್ತಿನಿಂದ 1, 2, 3, 4 ಮತ್ತು 5ನೇ ಅಂತಸ್ತಿನವರೆಗೆ, | 45712.23 ಚ.ಅಡಿ | 207795/- | 623385/- | 500/- | 10 ವರ್ಷಗಳ | 2078+374=2452 |
| 3 | ಸಾತಗಳ್ಳಿ ಬಸ್ ನಿಲ್ದಾಣ. | ವಾಣಿಜ್ಯ ಸ್ಥಳ ಸಂ-3(ಪ್ರಸ್ತುತ ಶಾಹಿನ್ ಪಿ.ಯು ಕಾಲೇಜ್ ಇರುವ ಸ್ಥಳ) ಬ್ಲಾಕ್-ಬಿ ಮೊದಲನೆ ಅಂತಸ್ತು. | 21942.65 ಚ.ಅಡಿ | 89596/- | 268788/- | 500/- | 10 ವರ್ಷಗಳ | 896+161=1057 |
| 4 | ಸಾತಗಳ್ಳಿ ಬಸ್ ನಿಲ್ದಾಣ. | ವಾಣಿಜ್ಯ ಸ್ಥಳ ಸಂ-4 (ಪ್ರಸ್ತುತ ವಿಶ್ವ ಭಾರತಿ ನರ್ಸಿಂಗ್ ಇರುವ ಸ್ಥಳ) ಬ್ಲಾಕ್-ಬಿ, ಎರಡನೆ ಅಂತಸ್ತು. | 22245.76 ಚ.ಅಡಿ | 183756/- | 551268/- | 500/- | 10 ವರ್ಷಗಳ | 1838+331=2168 |
| 5 | ಸಾತಗಳ್ಳಿ ಬಸ್ ನಿಲ್ದಾಣ. | ವಾಣಿಜ್ಯ ಸ್ಥಳ ಸಂ-5 (ಪ್ರಸ್ತುತ ಜ್ಞಾನೋದಯ ನರ್ಸಿಂಗ್ ಇರುವ ಸ್ಥಳ) ಬ್ಲಾಕ್-ಬಿ ಮೂರನೆ ಅಂತಸ್ತು. | 15249.71 ಚ.ಅಡಿ | 73503/- | 220509/- | 500/- | 10 ವರ್ಷಗಳ | 735+132=867 |
| 6 | ಸಾತಗಳ್ಳಿ ಬಸ್ ನಿಲ್ದಾಣ. | ವಾಣಿಜ್ಯ ಸ್ಥಳ ಸಂ-6 (ಪ್ರಸ್ತುತ ಮಹಾತ್ಮ ಗಾಂಧಿ ಬಿ.ಎಡ್, ಕಾಲೇಜು ಇರುವ ಸ್ಥಳ) ಬ್ಲಾಕ್ -ಬಿ, ನಾಲ್ಕನೆ ಅಂತಸ್ತು | 16849.62 ಚ.ಅಡಿ | 40000/- | 120000/- | 500/- | 10 ವರ್ಷಗಳ | 400+72=472 |
| 7 | ಸಾತಗಳ್ಳಿ ಬಸ್ ನಿಲ್ದಾಣ. | ವಾಣಿಜ್ಯ ಸ್ಥಳ ಸಂ-7 (ಪ್ರಸ್ತುತ ಚಂದನ್ ರಿಸೋರ್ಸ್ಸ್ ಇರುವ ಸ್ಥಳ) ಬ್ಲಾಕ್-ಬಿ & ಸಿ, ಮೂರನೆ ಅಂತಸ್ತು. | 9003.96 ಚ.ಅಡಿ | 25622/- | 76866/- | 500/- | 10 ವರ್ಷಗಳ | 256+46=302 |
| 8 | ಸಾತಗಳ್ಳಿ ಬಸ್ ನಿಲ್ದಾಣ. | ವಾಣಿಜ್ಯ ಸ್ಥಳ ಸಂ-8 (ಪ್ರಸ್ತುತ ಚಂದನ ಸ್ಕಿಲ್ ಡೆವೆಲಪ್‌ಮೆಂಟ್ ಇರುವ ಸ್ಥಳ) ಬ್ಲಾಕ್-ಸಿ 1&2 ಅಂತಸ್ತು. | 3922.88 ಚ.ಅಡಿ | 15000/- | 45000/- | 500/- | 10 ವರ್ಷಗಳ | 150+27=177 |

| | | | | | | | | |
|---|---|---|---|---|---|---|---|---|
| 9 | ಸಾತಗಳ್ಳಿ ಬಸ್ ನಿಲ್ದಾಣ. | ವಾಣಿಜ್ಯ ಸ್ಥಳ(ಕೊಠಡಿ) ಸಂ-9 (ಪ್ರಸ್ತುತ ಅಜೀಜ್ ಸೇಠ್ ಚಾರಿಟಬಲ್ ಟ್ರಸ್ಟ್ ಇರುವ ಸ್ಥಳ) ನೆಲ ಅಂತಸ್ತು | 244.35 ಚ.ಅಡಿ | 3300/- | 9900/- | 500/- | 5 ವರ್ಷಗಳ | 100+18=118 |

ದಿನಾಂಕ:- 30-01-2023 ರಿಂದ 13-02-2023 ರಂದು 14:00 ಗಂಟೆವರೆಗೆ ಇ-ಟೆಂಡರ್ ಮೂಲಕ ಅರ್ಜಿಯನ್ನು ಅಪ್-ಲೋಡ್ ಮಾಡಬಹುದಾಗಿದೆ.

- ಟೆಂಡರ್ ದಸ್ತಾವೇಜುಗಳನ್ನು "ಇ"-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.Karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
- **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:-13-02-2023 ಸಮಯಃ-14:00 ಗಂಟೆವರೆಗೆ**
- **ಟೆಂಡರ್ ತೆರೆಯುವ ದಿನಾಂಕಃ-15-02-2023 ಸಮಯಃ-15:00 ಗಂಟೆಗೆ (ತಾಂತ್ರಿಕ ತೊಂದರೆಗಳು ಇಲ್ಲದಿದ್ದಲ್ಲಿ) ಅರ್ಜಿದಾರರು ಅರ್ಜಿ ಶುಲ್ಕ, ಇ.ಎಂ.ಡಿ ಶುಲ್ಕದ ಮೂಲ ಡಿಡಿ ಗಳನ್ನು/ಇತರೆ ದಾಖಲಾತಿಗಳನ್ನು ವಿಭಾಗೀಯ ಕಚೇರಿಗೆ ಸಲ್ಲಿಸುವ ದಿನಾಂಕ: 30-01-2023 ಅವಧಿಯಿಂದ ದಿ:13-02-2023 ರಂದು 17:00 ಗಂಟೆವರೆಗೆ**

. ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ ವಿಳಾಸ: http://www.eproc.karnataka.gov.in ನ್ನು ತೆರೆದು ನೋಡುವುದು. ಮಳಿಗೆಗಳ ಕುರಿತು ಹೆಚ್ಚಿನ ಮಾಹಿತಿಗೆ ವಿಷಯ ನಿರ್ವಾಹಕರ ದೂರವಾಣಿ ಸಂಖ್ಯೆ 7019026615/9343554555 ನ್ನು ಮತ್ತು ವಿಭಾಗೀಯ ಸಂಚಲನಾಧಿಕಾರಿಯವರ ದೂರವಾಣಿ ಸಂಖ್ಯೆ:7760990802, ಸಹಾಯಕ ಸಂಚಾರ ವ್ಯವಸ್ಥಾಪಕರ ದೂರವಾಣಿ ಸಂಖ್ಯೆ,7760990811 ನ್ನು ಸಂಪರ್ಕಿಸಬಹುದಾಗಿದೆ.

-ಸಹಿ-

**ವಿಭಾಗೀಯ ನಿಯಂತ್ರಣಾಧಿಕಾರಿ**
**ಮೈಸೂರು ವಿಭಾಗ, ಮೈಸೂರು**

ಸೂಚನೆಗಳು:-

1) ವಾಣಿಜ್ಯ ಸ್ಥಳಗಳಿಗೆ ಪಾವತಿಸುವ ಇಎಂಡಿ ಮೊತ್ತಗಳನ್ನು ಡಿ.ಡಿ ಮುಖೇನ ಈ ಕಛೇರಿಗೆ ಪಾವತಿಸುವುದು ರೂ.500/-ನ್ನು ಮಾತ್ರ 'ಇ'-ಪೋರ್ಟಲ್‌ನಲ್ಲಿ ಪಾವತಿಸುವುದು. ಪ್ರತಿ ವರ್ಷ ಹಿಂದಿನ ಪರವಾನಿಗೆ ಶುಲ್ಕದ ಮೇಲೆ ಶೇ.10/- ರಷ್ಟು ಹೆಚ್ಚಾಗುವುದು. ವಾಣಿಜ್ಯ ಸ್ಥಳ /ಕೊಠಡಿಗಳನ್ನು ಉಪಯೋಗಿಸುವ ಉದ್ದೇಶವನ್ನು ಟೆಂಡರ್ ಅರ್ಜಿಯಲ್ಲಿ ನಮೂದಿಸಬೇಕು. ಯಾವುದೇ ಕಾರಣಕ್ಕೂ ಟೆಂಡರ್ ಅರ್ಜಿಯಲ್ಲಿ ಸೂಚಿಸಿರುವ ವ್ಯಾಪಾರವನ್ನು ಮಾಡಲು ಮಾತ್ರ ಅವಕಾಶವಿರುತ್ತದೆ. (ವಾಣಿಜ್ಯ ಸ್ಥಳ/ ಕೊಠಡಿಗಳಲ್ಲಿ ಒಲೆಯನ್ನು ಹಚ್ಚಿಸಲು ಅವಕಾಶ ಇರುವುದಿಲ್ಲ ಹಾಗೂ ಉಪಹಾರಗೃಹ/ದರ್ಶಿನಿಗಳಿಗೆ ಅವಕಾಶ ನೀಡಲಾಗುವುದಿಲ್ಲ. ಟೆಂಡರ್/ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷನ್ 32ಎ (ಎ)(111)ರಲ್ಲಿ ಪರಿಷ್ಕೃತ ಸ್ಟಾಂಪ್ ಅಕ್ಟ್ ನಂ:8/2003 ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಆಯ್ಕೆಗೊಂಡ 03 ದಿನದೊಳಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಬೇಕಾಗಿರುತ್ತದೆ.
2) ವಾಣಿಜ್ಯ ಸ್ಥಳಗಳಿಗೆ ಆಯ್ಕೆಯಾದ ನಂತರ ಸ್ಥಳದ ವಿಸ್ತೀರ್ಣವನ್ನು ನಿಗಮದ ಕಾಮಗಾರಿ ಶಾಖೆಯಿಂದ ಅಳತೆ ಮಾಡಿಸಿ ಆಯ್ಕೆಗೊಂಡ ಪರವಾನಗಿದಾರರಿಗೆ ಹಸ್ತಾಂತರಿಸಲಾಗುವುದು. ವಿಸ್ತೀರ್ಣದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಪ್ರೋ-ರೋಟಾ ಆಧಾರದನ್ವಯ ಪರವಾನಗಿ ಶುಲ್ಕವನ್ನು ನಿಗಧಿಪಡಿಸಲಾಗುವುದು.
3) ವಾಣಿಜ್ಯ ಸ್ಥಳಗಳ ಕರಡು ನಕಾಶೆಯನ್ನು "ಇ"-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗಿದ್ದು, ನಿಖರವಾದ ನಕಾಶೆಯನ್ನು ಹಸ್ತಾಂತರಿಸುವ ಸಮಯದಲ್ಲಿ ಒದಗಿಸಲಾಗುವುದು.
4) ಭದ್ರತಾ ಠೇವಣಿ ವಿವರ ಈ ಕೆಳಗಿನಂತೆ ಇರುತ್ತದೆ.

| ಕ್ರ.ಸಂ | ಪರವಾನಗಿ ಅವಧಿ | ಪಾವತಿಸಬೇಕಿರುವ ಭದ್ರತಾ ಠೇವಣಿ |
|---|---|---|
| 1 | 3 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 6 ಪಟ್ಟು |
| 2 | 5 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 8 ಪಟ್ಟು |
| 3 | 10 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 10 ಪಟ್ಟು |

5) ಆಯ್ಕೆ ಆದ ಪರವಾನಿಗೆದಾರರು ತಾವು ಸಲ್ಲಿಸಿರುವ ಇಎಂಡಿ ಹಣವನ್ನು ಭದ್ರತಾ ಠೇವಣಿಗೆ ಹೊಂದಾಣಿಕೆ ಮಾಡಿಕೊಂಡು ಸೂಚಿಸಿರುವ ಪರವಾನಿಗೆ ಶುಲ್ಕದ ಆರು/ಎಂಟು/ಹತ್ತು (06)(08)(10) ರಷ್ಟು ಹಣವನ್ನು ಭದ್ರತಾ ಠೇವಣಿಯಾಗಿ ಆಯ್ಕೆ ಪತ್ರ ಸ್ವೀಕರಿಸಿದ ನಂತರ ಡಿ.ಡಿ. ರೂಪದಲ್ಲಿ "ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ಮೈಸೂರು ಗ್ರಾಮಾಂತರ ವಿಭಾಗ, ಮೈಸೂರು" ಇವರ ಹೆಸರಿನಲ್ಲಿ ಪಾವತಿಸುವುದು. ಆಯ್ಕೆಗೊಂಡ ಪರವಾನಗಿದಾರರು ಸಕಾಲದಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳದಿದ್ದಲ್ಲಿ ಅಂತಹ ಬಿಡ್ಡುದಾರರ ಇ.ಎಂ.ಡಿ ಹಾಗೂ ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
6) ಆಯ್ಕೆಗೊಂಡ ಪರವಾನಿಗೆದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಶೇ.18 (ಸರ್ಕಾರಿ ನಿಯಮದಂತೆ ಬದಲಾವಣೆಗೆ ಒಳಪಟ್ಟಿದೆ) ರಷ್ಟು ಸೇವಾತೆರಿಗೆ/ ಜಿ.ಎಸ್.ಟಿಯನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು ಹಾಗೂ ತಮ್ಮ ವಾಣಿಜ್ಯ ಸ್ಥಳ/ಕೊಠಡಿಗಳಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.
7) ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್/ ನಿಬಂಧನೆಗಳಿಗೆ ಪರವಾನಗಿದಾರರು ಬದ್ಧರಾಗಿರಬೇಕು.
8) ಸಂಸ್ಥೆಯ ಮಾಸಿಕ ಪರವಾನಿಗೆ ಶುಲ್ಕ ಬಾಕಿಯಿರಿಸಿಕೊಂಡಿರುವವರು/ ಕಪ್ಪುಪಟ್ಟಿಗೆ ಸೇರಿರುವವರು, ಇ"-ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಲ್ಲ.

9) ವಾಣಿಜ್ಯ ಸ್ಥಳ/ಕೊಠಡಿಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

10) ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡುವುದು.

11) ವಾಣಿಜ್ಯ ಸ್ಥಳ/ಕೊಠಡಿಗಳಲ್ಲಿ ನೀರಿನ/ ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು ಪರವಾನಗಿ ಶುಲ್ಕದದೊಂದಿಗೆ ಸಂಬಂಧಪಟ್ಟ ಘಟಕದಲ್ಲಿ ಪರವಾನಗಿದಾರರೇ ಪಾವತಿಸುವುದು.

12) ನೀರು ಮತ್ತು ವಿದ್ಯುತ್‌ನ ಸೌಲಭ್ಯಗಳನ್ನು ನಿಗಮದ ಬಸ್ ನಿಲ್ದಾಣದಲ್ಲಿ ಲಭ್ಯತೆಯಾನುಸಾರ ಒದಗಿಸಲಾಗುವುದು. ಹೆಚ್ಚಿನ ಅವಶ್ಯಕತೆ ಇದ್ದಲ್ಲಿ ಪರವಾನಗಿದಾರರೇ ಕಲ್ಪಿಸಿಕೊಳ್ಳಬೇಕಾಗಿರುತ್ತದೆ.

13) ಅಯ್ಕೆಗೊಂಡ ಪರವಾನಿಗೆದಾರರು ವಾಣಿಜ್ಯ ಸ್ಥಳ/ಕೊಠಡಿಗಳನ್ನು ಸ್ವತ: ನಡೆಸುವುದಲ್ಲದೆ ಪರಬಾರೆ ಮಾಡುವಂತಿಲ್ಲ.

14) ಅಯ್ಕೆಗೊಂಡ ಪರವಾನಿಗೆದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇಎಂಡಿ., ಹಣವನ್ನು ಹಿಂತಿರುಗಿಸಲಾಗುವುದು.

15) ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕವನ್ನು ಆಯಾ ತಿಂಗಳ 07ನೇ ತಾರೀಖಿನೊಳಗೆ ಮತ್ತು ಸೇವಾತೆರಿಗೆ / ಜಿ.ಎಸ್.ಟಿಯನ್ನು ಆಯಾ ತಿಂಗಳ 05ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು.

16) ಅಯ್ಕೆಗೊಂಡ ಪರವಾನಿಗೆದಾರರು ಅವರ ವ್ಯಾಪ್ತಿಗೆ ಒಳಪಡುವ ವಿಸೀರ್ಣದ ಸ್ವಚ್ಚತೆಯನ್ನು ನಿರ್ವಹಣೆ ಮಾಡುವುದು ಅವರ ಜವಬ್ದಾರಿಯಾಗಿರುತ್ತದೆ.

17) ಪರವಾಸಗಿದಾರರು ಬಿಡ್ ಮಾಡಿದ ಮೊತ್ತದಲ್ಲಿ ಹೆಚ್--01 ಬಿಡ್ದುದಾರರನ್ನು ಆಯ್ಕೆ ಮಾಡಲಾಗುತ್ತದೆ. ಸೂಕ್ತ ಬಿಡ್ ಬಾರದೆ ಇದ್ದಲ್ಲಿ ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

18) ಪರವಾನಗಿದಾರರ ವ್ಯಾಪ್ತಿಯಲ್ಲಿ ನಡೆಸುವ ವಾಣಿಜ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಆಗಮಿಸುವ ಸಾರ್ವಜನಿಕರಿಗೆ/ ಸಿಬ್ಬಂದಿಗಳ ಸಂಪೂರ್ಣ ರಕ್ಷಣೆಯ ಜವಾಬ್ದಾರಿಯು ಪರವಾನಗಿದಾರ ವ್ಯಾಪ್ತಿಗೆ ಒಳಪಟ್ಟಿದ್ದು, ನಿಗಮದ ಜವಬ್ದಾರಿಯಾಗಿರುವುದಿಲ್ಲ.

19) ಪರವಾನಗಿದಾರರು ಅವರು ನಡೆಸುವ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ವಿವಿಧ ಇಲಾಖೆಗಳಿಂದ ಪಡೆಯಬೇಕಾದ ಲೈಸೆನ್ಸ್/ ಅನುಮತಿ/ ಆದೇಶಗಳನ್ನು ಪಡೆದುಕೊಳ್ಳುಬೇಕಿರುತ್ತದೆ.

ವಿಭಾಗೀಯ ನಿಯಂತ್ರಣಾಧಿಕಾರಿ
ಮೈಸೂರು ವಿಭಾಗ, ಮೈಸೂರು

S. Sup
Yashwanth